ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **1212/2022**

| | | |
|---|---|---|
| ಸಾಕ್ಷಿಯ ಹೆಸರುಃ | ಹಣಮಂತ್ರಾಯ | ಪ್ರಾಸಾಃ1 |
| ತಂದೆ/ಗಂಡನ ಹೆಸರುಃ | ಬಾಲಪ್ಪ | ಚಾಸಾಃ 1 |
| ವಯಸ್ಸು ಃ | 57 ವರ್ಷ | ದಿಃ 08-01-2026 |
| ಉದ್ಯೋಗಃ | ಪಿ.ಎಸ್.ಐ, ಕೆಂಭಾವಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋಧಿಸಲಾಯಿತು. |
| ವಾಸ ಸ್ಥಳಃ | ಕೆಂಭಾವಿ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನಾನು 10-12-2023 ರಿಂದ 2023 ರವರೆಗೆ ಸೈದಾಪೂರ ಪೋಲಿಸ ಠಾಣೆಯಲ್ಲಿ ನಾನು ಪಿ.ಎಸ್.ಐ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 24-05-2022 ರಂದು 4.30 ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿದ್ದಾಗ ಕರಿಬೆಟ್ಟ ಕ್ರಾಸ್ ಹತ್ತಿರ ಪವನ ದಾಬಾದ ಮುಂದೆ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯ ಮಾರಾಟ ಮಾಡಿ, ಕುಡಿಯಲು ಅನುಕೂಲ ಮಾಡಿಕೊಡುತ್ತಿದ್ದಾನೆ ಎಂಬ ಭಾತ್ಮಿ ಬಂದ ಮೇರೆಗೆ ಪಂಚರನ್ನು ಕರೆದುಕೊಂಡು, ಚಾಸಾಃ 4 ರಿಂದ 6 ರವರಿಗೆ ವಿಷಯ ತಿಳಿಸಿ ಸರಕಾರಿ ವಾಹನ ನಂಬರ ಕೆಎ-33-ಜಿ-0065 ನೇದ್ದರಲ್ಲಿ ಕುಳಿತು ಕರಿಬೆಟ್ಟ ಕ್ರಾಸ್ ಹತ್ತಿರ ಬಂದು ದೂರ ನಿಂತು ಮರೆಯಾಗಿ ನೋಡಲಾಗಿ ಪವನ ದಾಬಾ ಮುಂದುಗಡೆ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನು ಮದ್ಯ ಮಾರಾಟ ಮಾಡಿ, ಕುಡಿಯಲು ಅನುಕೂಲ ಮಾಡಿಕೊಟ್ಟಿರುತ್ತಾನೆ. ದಾಳಿ ಮಾಡಿದಾಗ ಆರೋಪಿತನು ಸಿಕ್ಕಿರುತ್ತಾನೆ. ಸದರಿ ಆರೋಪಿತನ ಹೆಸರು ಕೇಳಿದಾಗ ಅವನ ಹೆಸರು ಅಭಿಷೇಕ ತಂದೆ ಶಿವಕುಮಾರ ಎಂದು ತಿಳಿದು ಬಂದಿರುತ್ತದೆ. ಸ್ಥಳದಲ್ಲಿ ಪರಿಶೀಲಿಸಿದಾಗ ಒಂದು ರಟ್ಟಿನ ಬಾಕ್ಸನಲ್ಲಿ 180 ಎಮ್ ಎಲ್ ನ ಓಲ್ಡ ಟವರ ವಿಸ್ಕಿ, 360 ಎಮ್ ಎಲ್ ನ 10 ಕಿಂಗ ಫೀಷರ ಬೀಯರ ಸಿಕ್ಕಿರುತ್ತದೆ. ಪಂಚರ ಸಮಕ್ಷಮದಲ್ಲಿ ಜಪ್ತಿ ಪಂಚನಾಮೆಯನ್ನು 5.00 ಗಂಟೆಯಿಂದ 6.00 ಗಂಟೆಯವರೆಗೆ ಮಾಡಿರುತ್ತೇವೆ, 2 ಬಾಟಲಿಗಳನ್ನು ಎಫ್. ಎಸ್. ಎಲ್ ವರದಿಗಾಗಿ ಮತ್ತು ತಜ್ಞರ ವರದಿಗಾಗಿ ಪಡೆದುಕೊಂಡಿರುತ್ತೇವೆ. ನಂತರ ಠಾಣೆಗೆ ಬಂದು ಮು. ಮಾ, ಆರೋಪಿ ಮತ್ತು ಜಪ್ತಿ ಪಂಚನಾಮೆಯನ್ನು ಚಾಸಾಃ 8 ರವರ ಮುಂದೆ ಹಾಜರುಪಡಿಸಿರುತ್ತೇವೆ. ಜಪ್ತಿ ಪಂಚನಾಮೆಯನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಯಾಂಪಲನ್ನು ಗುರುತಿಸಿರುವುದರಿಂದ ಅದನ್ನು ಮು. ಮಾ. 1 ಮತ್ತು 2 ಎಂದು

ಗುರುತಿಸಲಾಯಿತು. ಜ್ಞಾಪಕ ಪತ್ರವನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಎಮ್, ಆರ್, ಬಿ. ವಕೀಲರಿಂದ.</u>

1. ಕರಿಬೆಟ್ಟ ಕ್ರಾಸ್ ಠಾಣೆಯಿಂದ 5-6 ಕಿ. ಮೀ ದೂರದಲ್ಲಿದೆ. 7 ರಿಂದ 8 ನಿಮಿಷಗಳ ಕಾಲ ಅವಕಾಶ ಬೇಕು. ಚಾಸಾಃ 6 ರವರ ಕಡೆಯಿಂದ ಪಂಚರನ್ನು ಕರೆಯಿಸಿರುತ್ತೇನೆ. ಪಂಚರು ನಮಗೆ ಪರಿಯವಿರುತ್ತಾರೆ ಎಂದರೆ ಸರಿಯಲ್ಲ. ಮು. ಮಾ. ಗಳನ್ನು ಎಲ್ಲಿಂದ ತಂದಿರುತ್ತಾರೆ ಎಂದು ವಿಚಾರಣೆ ಮಾಡಿರುವುದಿಲ್ಲ. ಸದರಿ ಗುನ್ನೆ ಸ್ಥಳಕ್ಕೆ ಹೋಗಿರುವುದಿಲ್ಲ, ಪಂಚನಾಮೆಯನ್ನು ಮಾಡಿರುವುದಿಲ್ಲ, ಮು. ಮಾ. ಮತ್ತು ಆರೋಪಿತನಿಗೂ ಯಾವುದೇ ಸಂಬಂದವಿರುವುದಿಲ್ಲ ಎಂದರೆ ಸರಿಯಲ್ಲ. ಅಂಕಿ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಮಾತುಗಳು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ